2ನೇಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ ಚನ್ನಗಿರಿ .

ಸಿಸಿ ನಂ.**18/2023**

ಹೆಸರುಃ ರಾಜಪ್ಪ ಚಾಸಾಃ 1

ತಂದೆಃ ಬಸಪ್ಪ ಪ್ರಾಸಾ: 1

ವಯಸ್ಸುಃ 65

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಕಾಕನೂರು, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 21.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ಬೈರೇಶ ನನ್ನ ಮಗ. ಸುಮಾರು 3 ವರ್ಷಗಳ ಹಿಂದೆ ನಾವು ನೆಂಟರ ಮನೆಗೆ ಹೋಗುತ್ತಿದ್ದಾಗ ಬೈಕ್ ಹಾಗೂ ಕಾರಿನ ನಡುವೆ ಕಾಕನೂರು ಗ್ರಾಮದಿಂದ ಸ್ವಲ್ಪ ದೂರದಲ್ಲಿ ರಾತ್ರಿ 7.00 ರಿಂದ 7.30 ರ ಸಮಯಕ್ಕೆ ಅಪಘಾತ ಆಗಿರುತ್ತದೆ. ಅಪಘಾತದ ಕಾಲಕ್ಕೆ ನಾನು ಕಾಕನೂರಿನಲ್ಲಿರುವ ನಮ್ಮ ಮನೆಯಲ್ಲಿದ್ದೆ. ಅಪಘಾತವನ್ನು ನೋಡಿದ ಜನರು ನನಗೆ ತಿಳಿಸಿರುತ್ತಾರೆ. ಅಪಘಾತದಲ್ಲಿ ನನ್ನ ಮಗ ಬೈರೇಶರವರ ತಲೆಗೆ ಪೆಟ್ಟಾಗಿರುತ್ತದೆ. ನಂತರ ಅಪಘಾತ ಸ್ಥಳದಿಂದ ಅಂಬ್ಯುಲೆನ್ಸ್ ನಲ್ಲಿ ನನ್ನ ಮಗ ಬೈರೇಶನನ್ನು ಸಂತೆಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಅಪಘಾತದ ಸ್ಥಳದಲ್ಲಿ ನೆರೆದಿದ್ದ 5-6 ಜನರು ಕರೆದುಕೊಂಡು ಹೋಗಿರುತ್ತಾರೆ. ನಾನು ಆಸ್ಪತ್ರೆಗೆ ನನ್ನ ಮಗನನ್ನು ನೋಡಲು ಹೋಗಿರುತ್ತೇನೆ. ಕಾರು ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿರುತ್ತದೆಂದು ತಿಳಿಸಿ ನನ್ನ ಸಹಿಯನ್ನು ದಾಖಲೆಗಳ ಮೇಲೆ ಪಡೆದಿರುತ್ತಾರೆ. ನಂತರ ಬೈರೇಶನ ಮೃತ ಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ನಾನು ಮೃತ ಬೈರೇಶನ ದೇಹವನ್ನು ಪಡೆದು ಅಂತ್ಯ ಸಂಸ್ಕಾರ ಮಾಡಿರುತ್ತೇನೆ. ನಂತರ ಸದರಿ ವಿಚಾರವಾಗಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ದಾಖಲೆ ಹಾಗೂ ಸಹಿಯನ್ನು **ನಿಪಿ 1, ನಿಪಿ 1 (ಎ)** ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಬರೆದಿರುವ ವಿಚಾರವನ್ನು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನಿಪಿ 1 ಕ್ಕೆ ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ.

ನಂತರ ಪೊಲೀಸರು ಸ್ಥಳ ಪಂಚನಾಮೆ ಜರುಗಿಸಲು ರಾತ್ರಿ ಸುಮಾರು 7.30 ರ ಸಮಯಕ್ಕೆ ಸ್ಥಳಕ್ಕೆ ಬಂದಿರುತ್ತಾರೆ. ಪಂಚನಾಮೆ ಕಾಲಕ್ಕೆ ನನ್ನ ಮಕ್ಕಳು ಜೊತೆಯಲ್ಲಿದ್ದರು. ಪಂಚನಾಮೆಯನ್ನು 8.00 ರಿಂದ 8.30ರವರೆಗೆ ಜರುಗಿಸಿರುತ್ತಾರೆ. ಪಂಚನಾಮೆಯನ್ನು ಹಾಗೂ ಸಹಿಯನ್ನು **ನಿಪಿ 2, ನಿಪಿ 2(ಎ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಒಂದು ಬಾವಚಿತ್ರವನ್ನು ತೆಗೆದಿರುತ್ತಾರೆ. ಬಾವಚಿತ್ರವನ್ನು **ನಿಪಿ 3** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಪಿ 4, ನಿಪಿ 4(ಎ)** ಎಂದು ಗುರುತಿಸಲಾಯಿತು.

ವಾಹನ ತಡೆ ಪಂಚಾಮೆ ಹಾಗೂ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ **ನಿಪಿ 5, ನಿಪಿ 5(ಎ)** ಎಂದು ಗುರುತಿಸಲಾಯಿತು. ಬಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸ್ಥಳದಲ್ಲಿ ತೆಗೆದಿರುತ್ತಾರೆಂದು ನುಡಿಯುತ್ತಾರೆ. ಸದರಿ ಬಾವಚಿತ್ರವನ್ನು **ನಿಪಿ 6** ಎಂದು ಗುರುತಿಸಲಾಯಿತು. ನಮ್ಮ ಊರಿನ ಹರೀಶ್ ರವರಿಂದ ಅಪಘಾತ ಆಗಿರುತ್ತದೆ ಎಂದು ತಿಳಿದು ಬಂದಿರುತ್ತದೆ ಅದರೆ ನನಗೆ ಕಾರಿನ ನೊಂದಣಿ ಸಂಖ್ಯೆ ಗೊತ್ತಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ಮಹಜರ್ ಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 01.06.2022 ರಂದು ಸಂಜೆ 7.00 ಗಂಟೆ ಬೈರೇಶ ಎಂ ಬಿ ಎಲ್ ಹೆಚ್ ಎ ಡಬ್ಲ್ಯೂ 111 ಎಂ 4 ಹೆಚ್ 10083 ಬೈಕ್ ತನ್ನ ಹೆಂಡತಿ ಊರಾದ ದೊಡ್ಡಮಾಗಡಿಗೆ ಕಾಕನೂರು ಗ್ರಾಮದಿಂದ ಸಂತೆಬೆನ್ನೂರು ಮಾರ್ಗವಾಗಿ ಹೋಗುತ್ತಿದ್ದ ಎಂದರೆ ಸರಿ. ಆರೋಪಿಯು ಕೆಎ 17 ಎಂ ಎ 3854 ನೇ ನೊಂದಣಿ ಸಂಖ್ಯೆಯುಳ್ಳ ಕಾರನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬೈರೇಶನಿಗೆ ಅಪಘಾತ ಪಡಿಸಿದ್ದರಿಂದ ಆತನ ತಲೆಗೆ ಬಲಗಾಲಿಗೆ ತೀವ್ರ ಪೆಟ್ಟು ಬಿದ್ದು ರಕ್ತ ಸ್ರಾವವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆಂದು ನಮೂದಿಸಿರುತ್ತೇನೆಂದರೆ ಸರಿ. ಅಪಘಾತದಲ್ಲಿ ಬೈಕ್ ಸಂಪೂರ್ಣ ಜಖಂಗೊಂಡಿರುತ್ತದೆ ಅಪಘಾತ ಪಡಿಸಿದ ರಸ್ತೆ ಬದಿಯಲ್ಲಿ ವಿದ್ಯುತ್ ಕಂಬಕ್ಕೂ ಅಪಘಾತ ಪಡಿಸಿರುತ್ತಾರೆ ಎಂದು ನಿಪಿ 1 ನ್ನು ದಿಃ 02.06.2022 ರಂದು ಸಲ್ಲಿಸಿರುತ್ತೇನೆ ಎಂದರೆ ಸರಿ.

ಸ್ಥಳ ಮಹಜರ್ ದಿಃ 05.06.2022 ರಂದು ಚಾಸಾ 6 ಮತ್ತು 15 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ರವರೆಗೆ ನಾನು ತೋರಿಸಿದ ಸ್ಥಳದಲ್ಲಿ ಚಾಸಾ 22ರರು ಜರುಗಿಸಿರುತ್ತಾರೆ ಎಂದರೆ ಸರಿ. ಪಂಚನಾಮೆಗೆ ಚಾಸಾ 6 ಮತ್ತು 15 ಸಹಿ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರಿಸಿ ನನ್ನ ಹಾಗೂ ಚಾಸಾ 6 ಮತ್ತು 15 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿ.

ದಿಃ 05.06.2022 ಸಂತೆಬೆನ್ನೂರು ಠಾಣಾ ಆವರಣದಲ್ಲಿ ನನ್ನ ಹಾಗೂ ಚಾಸಾ 6 ಮತ್ತು 15ರವರ ಸಮಕ್ಷಮ ಅಪಘಾತದಲ್ಲಿ ಬಾಗಿಯಾದ ವಾಹನಗಳನ್ನು ವಾಹನ ತಡೆ ಪಂಚನಾಮೆಯನ್ನು ಬೆಳಗ್ಗೆ 11.15 ರಿಂದ 12.30 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ನಿಪಿ 5 ನ್ನು ಜರುಗಿಸುವ ಕಾಲಕ್ಕೆ ನಿಪಿ 6ರಂತೆ ಬಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿ. ಅಪಘಾತಕ್ಕೆ ಆರೋಪಿಯ ಅತೀವೇಗ ಅಜಾಗರೂಕ ಚಾಲನೆಯೇ ಕಾರಣ ಎಂದರೆ ಸಾಕ್ಷಿಯ ಎರಡು ವಾಹನಗಳು ಮುಖಾಮುಖಿ ಡಿಕ್ಕಿಯಾಗಿ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –**

ನಿಪಿ 1 ನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಿಪಿ 1 ರಲ್ಲಿ ಬರೆದಿರುವ ಸಂಗತಿಗಳು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನಿಪಿ 1 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಅಪಘಾತದ ಕಾಲಕ್ಕೆ ನಾನು ಸ್ಥಳದಲ್ಲಿರಲ್ಲಿ ಎಂದು ಸಾಕ್ಷಿ ನುಡಿಯುತ್ತಾರೆ. ಅಪಘಾತ ಕಾಲಕ್ಕೆ ಮೃತ ಬೈರೇಶನ ವಾಹನ ಚಾಲನ ಪರವಾನಿಗೆ ಇತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ಅಪಘಾತ ದ ಕಾಲಕ್ಕೆ ಮೃತ ಬೈರೇಶನ ಹತ್ತಿರ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಮೃತ ಬೈರೇಶನ ಬಳಿ ಚಾಲನ ಪರವಾನಿಗೆ ಇಲ್ಲದಿದ್ದರಿಂದ ನಾನು ತನಿಖೆ ಕಾಲಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗುವ 3 ತಿಂಗಳ ಪೂರ್ವದಲ್ಲಿ ಬೈರೇಶನಿಗೆ ಮದುವೆಯಾಗಿತ್ತು. ಅಪಘಾತದ ಕಾಲಕ್ಕೆ ಬೈಕ್ ನೊಂದಣಿ ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾಹನ ಚಾಲನ ಪರವನಿಗೆ ಇಲ್ಲದೇ ಹಾಗೂ ನೊಂದಾವಣಿ ಇಲ್ಲದೆ ವಾಹನ ಚಾಲನೆ ಮಾಡಬಾರದೆಂದು ಕಾನೂನು ಇರುತ್ತದೆ ಎಂದರೆ ಸರಿ. ಮೃತ ಬೈರೇಶನಿಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ಯಾರು ಯಾರು ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಯಾವ ಸಮಯದಿಂದ ಯಾವ ಸಮಯದವರೆಗೆ ಜರುಗಿಸಿದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ನನ್ನ ಜೊತೆ ಯಾರು ಹಾಜರಿದ್ದರೆಂದು ನನಗೆ ಗೊತ್ತಿಲ್ಲ. ನಿಪಿ 2 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ 2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 4 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಖಾಲಿ ಕಾಗದದ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತವು ಆರೋಪಿಯ ಅತಿವೇಗ ಅಜಾಗರೂಕ ಚಾಲನೆಯಿಂದ ಸಂಬಂವಿಸಿರುವುದಿಲ್ಲ ಮೃತ ಬೈರೇಶನ ತಪ್ಪಿನಿಂದಲೇ ಸಂಬಂವಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**Sd/-**

**C/c 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ,ಚನ್ನಗಿರಿ.**